ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 50-53
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಮಹಿಳಾ ಚಳುವಳಿ: ಒಂದು ಅವಲೋಕನ

**ಡಾ. ಸಂಗನಗೌಡ ಶಿವನಗೌಡ**
ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರಕಾರಿ ಪದವಿ ಮಹಾವಿದ್ಯಾಲಯ, ಸಿಂಧನೂರು.

**Abstract:**
*ಸಮಾಜದಲ್ಲಿ ಅಸಮಾನತೆ, ಶೋಷಣೆ, ತಾರತಮ್ಯ, ಅನ್ಯಾಯ, ದೌರ್ಜನ್ಯ, ಪ್ರತಿರೋಧ, ಪ್ರತಿಭಟನೆ ಮಾಡುವುದನ್ನು ಕಾಣುತ್ತೇವೆ. ಈ ಪ್ರತಿರೋಧಗಳು ನಿರಂತರ ಕಂಡು ಬಂದಾಗ ಚಳುವಳಿಯ ರೂಪ ಪಡೆದುಕೊಳ್ಳುತ್ತದೆ. ಪ್ರತಿಯೊಂದು ಸಮಾಜದಲ್ಲಿಯೂ ಕೂಡ ವಿವಿಧ ಕಾರಣಗಳಿಗಾಗಿ ಹೋರಾಟ ನಡೆದಿರುವುದನ್ನು ಕಾಣಬಹುದಾಗಿದೆ. ಅಂತಹುಗಳೆಂದರೆ ಸ್ವಾತಂತ್ರ್ಯ ಚಳುವಳಿ, ಕಾರ್ಮಿಕ ಚಳುವಳಿ, ಮಹಿಳಾ ಚಳುವಳಿ, ರೈತ ಚಳುವಳಿ, ದಲಿತ ಚಳುವಳಿ, ಗುಲಾಮಿ ಪದ್ಧತಿಯ ವಿರೋಧಿ ಚಳುವಳಿ ಮುಂತಾದಗಳಿವೆ. ಜನರಲ್ಲಿ ಜಾಗೃತಿ, ತಿಳುವಳಿಕೆ, ಅರಿವನ್ನು ಮೂಡಿಸುವುದರಲ್ಲಿ ಸಮಾಜದ ಪರಿವರ್ತನೆಗೆ ಇದು ಕಾರಣವಾಗಿದೆ. ಕೆಲವು ಚಳುವಳಿಗಳು ನಾಯಕರ ಪ್ರಯತ್ನದಿಂದ ಸಾಗಿದರೆ ಇನ್ನು ಕೆಲವು ಚಳುವಳಿಗಳು ಅನಿವಾರ್ಯವಾದ ಸಾಂಸ್ಕೃತಿಕ ಪರಿವರ್ತನೆಯಗಳಾಗಿವೆ. ಪ್ರಸ್ತುತ ಲೇಖನದಲ್ಲಿ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಮಹಿಳಾ ಚಳುವಳಿಯನ್ನು ಅವಲೋಕಿಸಲಾಗಿದೆ.*

**Keywords:** *ಸಾಮಾಜಿಕ ವ್ಯವಸ್ಥೆ, ಸಾಮಾಜಿಕ ಅಸಮಾನತೆ, ಲಿಂಗ ತಾರತಮ್ಯ, ಮಹಿಳಾ ಚಳುವಳಿ.*

## ಪೀಠಿಕೆ

ಮಾನವ ಸಮಾಜದಲ್ಲಿ ಸಮಾನತೆಯನ್ನು ಕಾಣುವ ನಿಟ್ಟಿನಲ್ಲಿ ಚಳುವಳಿಗಳು ಮ್ರಮುಖ ಪಾತ್ರವಹಿಸುತ್ತವೆ. ಭಾರತೀಯ ಸಮಾಜದಲ್ಲಿ ವೇದಗಳ ಕಾಲದ ಆರಂಭದ ಅವಧಿಯಲ್ಲಿ ಬಿಟ್ಟರೆ, ಇನ್ನುಳಿದ ಎಲ್ಲಾ ಅವಧಿಯಲ್ಲಿಯೂ ಮಹಿಳೆ ಪುರುಷನಿಗೆ ಅಧೀನಳಾಗಿಯೇ ಬಾಳಬೇಕಿತ್ತು. ಮಹಿಳೆ ಮತ್ತು ಪುರುಷನ ಸಮಾನತೆಯನ್ನು ಹಾಗೂ ಇವರಿಬ್ಬರಿಗೆ ಸಮಾನ ಹಕ್ಕುಗಳನ್ನು ನೀಡಬೇಕು ಎಂಬುದನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ತಾರತಮ್ಯದಿಂದ ಯಾವ ಸಮಾಜವೂ ಹೊರತಾಗಿಲ್ಲ ಜಾತಿ, ವರ್ಗ, ಲಿಂಗ, ಗುಲಾಮಗಿರಿ ಮುಂತಾದ ಹೆಸರಿನಲ್ಲಿ ನಡೆಯುವ ತಾರತಮ್ಯವು ಅಸಮಾನತೆಯ ಮೂಲವಾಗಿದೆ. ಈ ಅಸಮಾನತೆಯ ನೆಲೆಯಿಂದಾಗಿ ಮಹಿಳೆಯರು ನಿರಂತರ ಶೋಷಣೆಗೆ ಒಳಗಾಗುತ್ತಾರೆ. ಇದರಿಂದ ಶೋಷಣೆಗೆ ಒಳಗಾದವರು ತಮ್ಮ ಸ್ಥಾನಮಾನಗಳನ್ನು ಸುಧಾರಿಸಲು ಚಳುವಳಿಗಳನ್ನು ರೂಪಿಸುತ್ತಾರೆ. ಇದು ಸಮಾಜವನ್ನು ಕ್ರಿಯಾಶೀಲ ಗೊಳಿಸಿ ಸಮಾನತೆಯತ್ತ ಕೊಂಡೊಯ್ಯುತ್ತದೆ.

## ಮಹಿಳಾ ಚಳುವಳಿ ಎಂದರೇನು?

ಭಾರತೀಯ ಮಹಿಳೆಯರನ್ನು ಸಾಮಾಜಿಕ ಪರಾಧೀನತೆಯಿಂದ ಹಾಗೂ ಶತಶತಮಾನಗಳಿಂದ ಅನುಭವಿಸುತ್ತಾ ಬಂದಿರುವ ದಬ್ಬಾಳಿಕೆ, ದೌರ್ಜನ್ಯ, ಶೋಷಣೆ,ತಾರತಮ್ಯ, ಮುಂತಾದ ಆಯಾಮಗಳಿಂದ ಮಹಿಳೆಯರನ್ನು ಬಿಡುಗಡೆ ಮಾಡಬೇಕೆಂಬ ನಿಟ್ಟಿನಲ್ಲಿ

**Please cite this article as:** ಸಂಗನಗೌಡ ಶಿವನಗೌಡ. (2023). ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಮಹಿಳಾ ಚಳುವಳಿ: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(4), 50–53.

ವ್ಯಕ್ತವಾದುದೆ ಮಹಿಳಾ ಚಳುವಳಿ ಅಥವಾ ಹೋರಾಟವಾಗಿದೆ.

**ಸ್ವಾತಂತ್ರ್ಯಪೂರ್ವದ ಮಹಿಳಾ ಚಳುವಳಿಗಳು**

ಬ್ರಿಟಿಷರು ಭಾರತವನ್ನು ಪ್ರವೇಶಿಸುವುದಕ್ಕೆ ಮುಂಚೆ ಯಾವುದೇ ತರಹದ ಮಹಿಳಾ ಹೋರಾಟಗಳು ನಡೆದಿರುವ ಬಗ್ಗೆ ನಮಗೆ ದಾಖಲೆಗಳು ಇಲ್ಲ. ಹೀಗಾಗಿ ಮಹಿಳಾ ಚಳುವಳಿಗಳು ಆರಂಭದ ಅವಧಿಯನ್ನು ಸ್ವಾತಂತ್ರ ಪೂರ್ವ ಭಾರತಕ್ಕೆ ಬ್ರಿಟಿಷರ ಆಗಮನದಿಂದ ಎಂದು ಪ್ರಾರಂಭಿಸಬಹುದು. ಈ ದೇಶವನ್ನು ಅನೇಕ ರಾಜಮಹಾರಾಜರು ವಿವಿಧ ಭಾಗಗಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ಆಡಳಿತ ನಡೆಸುತ್ತಿದ್ದರು. ಇದರಿಂದಾಗಿ ದೇಶದ ತುಂಬೆಲ್ಲಾ ಒಂದೇ ತರಹದ ಚಳುವಳಿಯನ್ನು ರೂಪಿಸಲು ಸಾಧ್ಯವಾಗಲಿಲ್ಲ. ಮಹಿಳೆಯರು ಹೊಂದಿರುವ ವಿವಿಧ ವೈವಿಧ್ಯತೆಗಳೇ ಅವರ ಜೀವನದಲ್ಲಿ ತೊಂದರೆಗಳ ಸೃಷ್ಟಿಗೆ ಕಾರಣವಾಯಿತು.

ಸತಿಪದ್ಧತಿ ಧಾರ್ಮಿಕ ವಿಷಯವಾಗಿದ್ದರಿಂದ ಅಲ್ಲಿಯ ಅಧಿಕಾರಿಗಳು ಇದನ್ನು ನಿಷೇಧಿಸಲು ಮನಸ್ಸು ಮಾಡಲಿಲ್ಲ. ಏಕೆಂದರೆ ಇದು ಧರ್ಮಾಧಾರಿತ ವಿಷಯವಾಗಿತ್ತು. ಹಲವು ಸುಧಾರಣಾವಾದಿಗಳ ಪ್ರಯತ್ನದಿಂದ ಸತಿಪದ್ಧತಿ ನಿಷೇಧ ಕಾನೂನು 1829ರಲ್ಲಿ ಜಾರಿಗೆ ಬಂದಿತು. ಅದೇ ರೀತಿ ಬಾಲ್ಯ ವಿವಾಹದಿಂದ ಚಿಕ್ಕ ಚಿಕ್ಕ ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವಾಗುತ್ತಿತ್ತು. ಹೆಣ್ಣು ಶಿಶುಹತ್ಯೆಯೂ ಭೂಮಾಲೀಕರಲ್ಲಿ ನಿರಂತರವಾಗಿ ನಡೆಯುತ್ತಿತ್ತು. ಇವುಗಳ ಬಗ್ಗೆ ಎಲ್ಲಾ ದಾಖಲೆಗಳು ಬ್ರಿಟಿಷ್ ಸರಕಾರದ ಹತ್ತಿರ ಇದ್ದರೂ ಅವುಗಳನ್ನು ನಿಯಂತ್ರಿಸುವುದು ಕಷ್ಟವಾಗಿತ್ತು.

ಏಕೆಂದರೆ ಬ್ರಿಟಿಷ್ ಸರಕಾರಕ್ಕೆ ಸಂಪ್ರದಾಯವಾದಿಗಳನ್ನು ಎದುರು ಹಾಕಿಕೊಳ್ಳುವುದು ಬೇಕಾಗಿರಲಿಲ್ಲ. ನಂತರದಲ್ಲಿ ಬ್ರಿಟಿಷ್ ಆಳ್ವಿಕೆಯಲ್ಲಿ ಮಹಿಳೆಯರ ಎರಡು ವಿಷಯಗಳು ಪ್ರಬಲವಾಗಿ ಮುನ್ನಲೆಗೆ ಬಂದವು. ಭಾರತೀಯ ಮಹಿಳೆಯರ ವಿಷಯದಲ್ಲಿ ಮೂಢನಂಬಿಕೆಗಳು, ಅನಾಗರಿಕರು ಎಂದು ಅವರನ್ನು ಕೀಳಾಗಿ ನಡೆಸಿಕೊಳ್ಳುತ್ತಾರೆ ಎನ್ನುವ ಬ್ರಿಟಿಷರ ವಾದಗಳನ್ನು ಸುಧಾರಣಾವಾದಿಗಳು ಅಲ್ಲಗಳೆಯಲು ಪ್ರಯತ್ನಿಸಿದರು. ಮುಖ್ಯವಾಗಿ ಕೈಗೆತ್ತಿಗೊಂಡ ವಿಷಯವೆಂದರೆ ರಾಜರಾಮ ಮೋಹನರಾಯರು ಸತಿಪದ್ಧತಿ ಆಚರಣೆಯನ್ನು ರದ್ದುಪಡಿಸಬೇಕು ಎಂಬ ಪ್ರಯತ್ನದಿಂದಾಗಿ ಅಂತಿಮವಾಗಿ ಲಾರ್ಡ್ ವಿಲಿಯಂ ಬೆಂಟಿಂಕ್ ಅವರು 1829 ರಲ್ಲಿ ಸತಿಪದ್ಧತಿಯನ್ನು ರದ್ದುಪಡಿಸಿದರು.

ಶಿಶುಹತ್ಯೆಯನ್ನು ಕೂಡಾ ಅಪರಾಧವೆಂದು ಬಂಗಾಲದ ಈಶ್ವರಚಂದ್ರ ವಿದ್ಯಾಸಾಗರರವರು ಸತತ ಪ್ರಯತ್ನದ ಫಲವಾಗಿ ಬಾಲ್ಯವಿವಾಹ, ವಿಧವಾ ಪುನರ್ ವಿವಾಹ, ಮಹಿಳಾ ಶಿಕ್ಷಣ ಮುಂತಾದಗಳು ಮಹಿಳೆಯರ ಬದುಕು ಸುಧಾರಿಸಲು ಸಾಧ್ಯವೆನ್ನುವ ಸತ್ಯವನ್ನು ಕಂಡುಕೊಂಡರು. ಭೂಪಾಲ್‌ನ ಬೇಗಂ ರವರು ಪರ್ದಾ ವ್ಯವಸ್ಥೆಯ ವಿರುದ್ಧ ಚಳುವಳಿ ಘೋಷಿಸಿದರು. ಅದೇ ರೀತಿ ಧರ್ಮ ಆಧಾರಿಸಿಯೆ ಕಾನೂನಿನಲ್ಲಿ ಸುಧಾರಣೆಗಳನ್ನು ತರಲು ಪ್ರಯತ್ನಿಸಿದವು ಮಹಿಳಾಪರ ಕಾನೂನುಗಳನ್ನು ಜಾರಿ ಮಾಡಲು ಮುಂದಾದರು. ಇದರಿಂದ ಮಹಿಳೆಯರ ಬದುಕಿನಲ್ಲಿ ಒಂದು ಸಂಚಲನವನ್ನು ಮೂಡಿಸಿತು.

ಜ್ಯೋತಿ ಬಾ ಪುಲೆ ಮತ್ತು ಸಾವಿತ್ರಿಬಾಯಿ ಪುಲೆ ಅವರು ಹೆಣ್ಣುಮಕ್ಕಳಿಗೆ ಶಿಕ್ಷಣ ಎನ್ನುವುದು ಕನಸಾಗಿದ್ದ ಕಾಲದಲ್ಲಿ ಸಂಪ್ರದಾಯವಾದಿಗಳ ವಿರೋಧದಲ್ಲಿ ಮಹಿಳಾ ಶಿಕ್ಷಣಕ್ಕೆ ಮತ್ತು ವಿಧವೆಯರ ಮಕ್ಕಳಿಗೆ ಆಶ್ರಮವನ್ನು ತೆರೆದರು. ಸತ್ಯಶೋಧನ ಸಮಿತಿ 1849ರಲ್ಲಿ ಪುಣೆಯ ಭಿಡೆವಾಡಿಯಲ್ಲಿ ಮೊದಲ ಶಾಲೆಯನ್ನು ಆರಂಭಿಸಿದರು. ಈ ಶಾಲೆಯಲ್ಲಿ ದಲಿತ, ಅಲ್ಪಸಂಖ್ಯಾತ, ಹಿಂದುಳಿದ ಸಮುದಾಯಗಳ ಹೆಣ್ಣು ಮಕ್ಕಳಿದ್ದರೆ, ಹೆಣ್ಣು ಮಕ್ಕಳು ವಿದ್ಯೆ ಕಲಿತರೆ ಅಪರಾಧ ಎಂದು ನೋಡುವ ಸಮಯದಲ್ಲಿ ಶಿಕ್ಷಣದ ಮಹತ್ವವನ್ನು ತಿಳಿಸಿದರು.

1816ರಲ್ಲಿ ಪ್ರೊ. ಇರಾವತಿ ಕರ್ವೆಯವರಿಂದ ಪ್ರಾರಂಭಿಸಲ್ಪಟ್ಟ ಇಂಡಿಯನ್ ಮಹಿಳಾ ವಿಶ್ವವಿದ್ಯಾಲಯವು ಮಹಿಳೆಯರಿಗೆ ಶಿಕ್ಷಣವನ್ನು ಒದಗಿಸುತ್ತಿರುವ ವಿದ್ಯಾಸಂಸ್ಥೆಗಳಲ್ಲಿ ಒಂದಾಗಿ ಮಹಿಳೆಯರು ಶಾಲೆಗೆ ಹೋಗುವ ಸಂಖ್ಯೆ ಹೆಚ್ಚಿಸಿ ಅವರನ್ನು ಬೆಳಕಿನೆಡೆಗೆ ಕರೆತಂದರು.

**ಸ್ವಾತಂತ್ರ್ಯಾನಂತರ ಮಹಿಳಾ ಚಳುವಳಿಗಳು**

ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಸುದೀರ್ಘ ಚಳುವಳಿಯಲ್ಲಿ ಹೆಚ್ಚಿನ ಸಂಖ್ಯೆಯ ಮಹಿಳೆಯರು ಹಾಗೂ ಮಹಿಳಾ ಸಂಘಟನೆಗಳು ಭಾಗವಹಿಸಿದ್ದವು. ಪಾರಂಪರಿಕವಾಗಿ ಆಚರಣೆಯಲ್ಲಿದ್ದ ಮಹಿಳೆಯರಿಗೆ ಸಂಬಂಧಿಸಿದ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಅನೇಕ ಕ್ರಮಗಳನ್ನು ಕೈಗೊಂಡರು. ಸ್ವಾತಂತ್ರ್ಯಪಡೆದು, ಸಂವಿಧಾನ ರಚನೆಯಾದಾಗಿನಿಂದ ಮಹಿಳೆಯರು ಅನೇಕ ಹಕ್ಕುಗಳನ್ನು ಪಡೆದುಕೊಂಡು ಪುರುಷರಿಗೆ ಸರಿ ಸಮಾನವಾದ ವಯಸ್ಕ ಮತದಾನ ಪದ್ಧತಿಯ ಮೂಲಕ ಮತದಾನದ ಹಕ್ಕನ್ನು ಪಡೆದುಕೊಂಡರು.

ಸ್ವಾತಂತ್ರ್ಯ ನಂತರ ಹಲವಾರು ವರ್ಷಗಳಲ್ಲಿ ಮಹಿಳಾ ಚಳುವಳಿಯಲ್ಲಿ ಅಪಾರ ಬದಲಾವಣೆಗಳುಂಟಾಗಿ ಮಹಿಳೆಯರ ಮೇಲಿದ್ದ ಅನೇಕ ಅಸಡ್ಡೆ, ಹಿಂಸೆ, ದೌರ್ಜನ್ಯಗಳು ಮುಂತಾದಗಳು ಕ್ಷೀಣಿಸುತ್ತಾ ಸಾಗಿದವು. ಇವೆಲ್ಲದರ ಪರಿಣಾಮವಾಗಿ ಸ್ವತಂತ್ರ ಭಾರತದ ನಂತರ ಅಮ್ಮು ಸ್ವಾಮಿನಾಥನ್, ದಾಕ್ಷಾಯಣಿ, ವೇಲಾಯುಧನ್, ದುರ್ಗಾಬಾಯಿ ದೇಶಮುಖ್, ಮಾಲತಿ ಚೌದರಿ, ಸುಚೇತಾ ಕೃಪಲಾನಿ, ವಿಜಯಲಕ್ಷ್ಮೀ ಪಂಡಿತ್, ಸರೋಜಿನಿ ನಾಯ್ಡು, ಬೇಗಂ ಜಹನಾರ್ ಷಾ ನವಾಜ್ ಮುಂತಾದ ಮಹಿಳೆಯರು ಸಂವಿಧಾನ ರಚನೆಯಲ್ಲಿ ಪಾಲ್ಗೊಂಡರು.

ಸಂವಿಧಾನದ 14ನೇ ಅನುಚ್ಛೇದದ ಪ್ರಕಾರ ಕಾನೂನಿನ ಮುಂದೆ ಎಲ್ಲರೂ ಸಮಾನರು– ಯಾವುದೇ ವ್ಯಕ್ತಿಯನ್ನು ಕಾನೂನಿನ ದೃಷ್ಟಿಯಿಂದ ಅಸಮಾನತೆಯಿಂದ ನೋಡುವಂತಿಲ್ಲ. ಎಲ್ಲರಿಗೂ ಸಮಾನ ರಕ್ಷಣೆ ನೀಡಬೇಕು. ಸಂವಿಧಾನದ 15ನೇ ಅನುಚ್ಛೇದದ ಪ್ರಕಾರ ಭಾರತದ ಯಾವುದೇ ನಾಗರಿಕರನ್ನು ಧರ್ಮ, ಜಾತಿ, ಜನಾಂಗ, ಲಿಂಗ, ಜನ್ಮಸ್ಥಳ ಮುಂತಾದ ಆಧಾರದ ಮೇಲೆ ತಾರತಮ್ಯ ಮಾಡುವಂತಿಲ್ಲ. ಸಂವಿಧಾನದ 16ನೇ ಅನುಚ್ಛೇದದ ಪ್ರಕಾರ ದೇಶದ ಎಲ್ಲ ಪ್ರಜೆಗಳಿಗೂ ಮುಕ್ತ ಉದ್ಯೋಗವಕಾಶಗಳನ್ನು ಕಲ್ಪಿಸುವುದು ಹಾಗೂ ಯಾವುದೇ ನಿರ್ಬಂಧ ಹೇರಬಾರದು. ಸಂವಿಧಾನದ 29ನೇ ಅನುಚ್ಛೇದದ (2) ಪ್ರಕಾರ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದಿಂದ ನೆರವು ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಲಿಂಗ, ಜಾತಿ, ಮತಧರ್ಮ, ಜನಾಂಗ, ಭಾಷೆ ಮುಂತಾದವುಗಳ ಆಧಾರದ ಮೇಲೆ ಶಿಕ್ಷಣ ಅವಕಾಶಗಳು ನಿರಾಕರಿಸಲು ಸಾಧ್ಯವಿಲ್ಲವೆಂದು ಘೋಷಿಸಿದೆ ಹಾಗೂ ಸಂವಿಧಾನದ 42ನೇ ಅನುಚ್ಛೇದದ ಪ್ರಕಾರ ದುಡಿಯುವ ಮಹಿಳೆಯರಿಗೆ ಪ್ರಸೂತಿ ಪ್ರಯೋಜನ ದೊರೆಯುವಂತೆ ರಾಜ್ಯ ಸರಕಾರವು ಉಪಬಂಧವನ್ನು ಮಾಡತಕ್ಕದ್ದು

1947 ಆಗಸ್ಟ್ 15 ರಂದು ಭಾರತ ಸ್ವಾತಂತ್ರ್ಯವಾಯಿತು. ತನ್ನದೆ ಆದ ಸಂವಿಧಾನವನ್ನು ಜನವರಿ 26 1950 ಜಾರಿಗೊಳಿಸಲಾಯಿತು. ಅಂದಿನಿಂದ ಲಿಂಗ, ಜಾತಿ, ಮತ, ಪಂಗಡ ಮುಂತಾದವುಗಳಲ್ಲಿ ತಾರತಮ್ಯಗಳನ್ನು ಕಡೆಗಣಿಸಿ ಸ್ತ್ರೀ–ಪುರುಷರಿಗೆ ಸಮಾನವಾದ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ನೀಡಲಾಯಿತು ಹಾಗೂ ಕೇಂದ್ರ ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನೂ ಹಾಗೂ 1990ರಲ್ಲಿ ಮಹಿಳಾ ಆಯೋಗವನ್ನು ಸ್ಥಾಪಿಸಿತು.

ಸರಕಾರ, ಸಂಘ ಸಂಸ್ಥೆಗಳು, ಸ್ವಯಂ ಸೇವಾ ಸಂಘಗಳು, ಮಹಿಳಾ ವೇದಿಕೆಗಳು ಮುಂತಾದವುಗಳ ಪ್ರಯತ್ನದಿಂದಾಗಿ ಮಹಿಳೆಯರ ಅಂತಸ್ತು ಮತ್ತು ಸ್ಥಾನಮಾನಗಳಲ್ಲಿ ಸಾಕಷ್ಟು ಸುಧಾರಣೆ ಆದರೂ ಇಂದಿಗೂ ಕೂಡ ಲಿಂಗತಾರತಮ್ಯ ನಿಂತಿಲ್ಲ.

ಇಂದಿಗೂ ಕೂಡ ಲಿಂಗ ಸಮಾನತೆಗಾಗಿ ಹೋರಾಟ ನಡೆಯುತ್ತಲೆ ಇದೆ.

ಒಟ್ಟಾರೆ ಮಹಿಳಾ ಚಳುವಳಿಯು ತನ್ನ ಹಾದಿಯುದ್ದಕ್ಕೂ ಮಹಿಳೆಯರ ಹಕ್ಕೊತ್ತಾಯವನ್ನು ಮಂಡಿಸುತ್ತಾ, ವಿಭಿನ್ನ ನೆಲೆಯಲ್ಲಿ ಇತರರ ಚಳುವಳಿಗಿಂತಲೂ ಭಿನ್ನವಾಗಿ ಗುರುತಿಸಿಕೊಂಡಿದೆ. ಸರಕಾರದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ವ್ಯವಸ್ಥೆಯ ಪುರುಷ ಪ್ರಧಾನಧೋರಣೆಗಳನ್ನುಪ್ರಶ್ನಿಸುತ್ತಾ ಮುಂದುವರಿದಿದೆ.

**ಪರಾಮರ್ಶನ ಗ್ರಂಥಗಳು**


- ಗಾಯತ್ರಿ ಎನ್. (1998). *ಮಹಿಳಾ ಚಳುವಳಿಯ ಮಜಲುಗಳು.* ನವಕರ್ನಾಟಕ ಪಬ್ಲಿಕೇಷನ್.
- ಸುಶಿ ಕಾಡನಕುಪ್ಪೆ. (2020). ಸ್ತ್ರೀವಾದ: ಇತಿಹಾಸ ಮತ್ತು ಸ್ವರೂಪ. ಶ್ರೀ ರಾಜೇಂದ್ರ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್.
- *History of the Women's Rights Movement - National Women's History Alliance*. (2019, November 5). National Women's History Alliance.
- Houck, D. W., & Dixon, D. E. (2008). Women and the Civil Rights Movement, 1954-1965. In *University Press of Mississippi eBooks*. https://doi.org/10.14325/mississippi/9781604731071.001.0001
- Ryan, B., & Ray, R. (2000). Fields of Protest: Women's movements in India. *Contemporary Sociology*, *29*(5), 742.